**2019–20 ರಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು**

| **ಬೆಳೆಗಳು** | **ತಳಿ** | **ಶಿಫಾರಸ್ಸು ಮಾಡಿದ ವಲಯ** |
|---|---|---|
| ನೆಲಗಡಲೆ | ಜಿಕೆವಿಕೆ–7 | ವಲಯ–5 |
| ಅಲಸಂದೆ | ಕೆಸಿ–8 (ಕೆಬಿಸಿ–11) | ವಲಯ–5 |
| ಮೇವಿನ ಅಲಸಂದೆ | ಎಂ.ಎಫ್.ಸಿ.–09–3 (ಎಂ.ಎಫ್.ಸಿ–3) | ವಲಯ–5 ಮತ್ತು 6 |

ನೆಲಗಡಲೆ–ಜಿಕೆವಿಕೆ 27 – ಈ ತಳಿಯು ದಪ್ಪ ಮತ್ತು ತಿಳಿ ಕಂದು ಬಣ್ಣದ ಬೀಜ ಹೊಂದಿದ್ದು ಮುಂಗಾರು (ಜೂನ್–ಜುಲೈ) ಮತ್ತು ಬೇಸಿಗೆ (ಡಿಸೆಂಬರ್–ಜನವರಿ) ಬಿತ್ತನೆಗೆ ಸೂಕ್ತವಾದ ತಳಿ. 110 – 115 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಸುರಕ್ಷಿತ ನೀರಾವರಿಯಡಿಯಲ್ಲಿ ಬೀಜದ ಇಳುವರಿ 30 ರಿಂದ 32 ಕ್ವಿ /ಹೆ. ಈ ತಳಿಯು ಎಲೆ ಚುಕ್ಕೆ ಮತ್ತು ಎಲೆ ತುಕ್ಕು ರೋಗಗಳಿಗೆ ನಿರೋಧಕತೆ ಹೊಂದಿದೆ. ಈ ತಳಿಯನ್ನು ವಲಯ–5 ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಅಲಸಂದೆ – **ಕೆ.ಸಿ.–8 (ಕೆಬಿಸಿ – 11) ಅಲಸಂದೆ** – ಈ ತಳಿಯು 80 – 85 ದಿನಗಳಲ್ಲಿ ಕಟಾವಿಗೆ ಬರುವ ಅಲ್ಪಾವಧಿ ತಳಿಯಾಗಿದ್ದು, ಜುಲೈ–ಆಗಸ್ಟ್–ಸೆಪ್ಟೆಂಬರ್ ಮತ್ತು ಜನವರಿ–ಫೆಬ್ರವರಿ ಬಿತ್ತನೆಗೆ ಸೂಕ್ತವಾಗಿದೆ. ಬೀಜಗಳು ಮಧ್ಯಮ ದಪ್ಪ ಮತ್ತು ತಿಳಿ ಕಂದು ಬಣ್ಣದ್ದಾಗಿರುತ್ತವೆ. ಒಣ ಬೀಜಗಳು ಬೇಳೆ ಕಾಳುಗಳಾಗಿ ಬಳಸಲು ಸೂಕ್ತವಾಗಿವೆ. ಸುರಕ್ಷಿತ ನೀರಾವರಿಯಡಿಯಲ್ಲಿ ಬೀಜದ ಇಳವರಿಯು 13–14 ಕ್ವಿ/ಹೆ. ಈ ತಳಿಯನ್ನು ವಲಯ–5 ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಮೇವಿನ ಅಲಸಂದೆ – ಎಂ.ಎಫ್.ಸಿ.–09–3 (ಎಂ.ಎಫ್.ಸಿ–3): ಈ ತಳಿಯು ಹೆಚ್ಚು ಹಸಿರು ಹಾಗೂ ಒಣ ಮೇವಿನ ಇಳುವರಿ, ಹೆಚ್ಚು ಎಲೆಕಾಂಡ ಅನುಪಾತ, ಹೆಚ್ಚು ಒಣ ಪದಾರ್ಥ ಜೀರ್ಣವಾಗುವಿಕೆ ಹಾಗೂ ಹೆಚ್ಚಿನ ಕಾಳಿನ ಇಳುವರಿ ಹೊಂದಿದೆ. ಈ ತಳಿಯ ಬೆಳವಣಿಗೆ ಪೊದೆಯಾಕಾರವಾಗಿ ಹೆಚ್ಚು ರೆಂಬೆಗಳಿಂದ ಕೂಡಿದ್ದು, ಹಳದಿ ಎಲೆ ನಂಜು, ತುಕ್ಕು ರೋಗಗಳಿಗೆ ನಿರೋಧಕತೆ ಹಾಗೂ ಎಲೆಚುಕ್ಕೆ ರೋಗಗಳಿಗೆ ಸಹಿಷ್ಣುತೆ ಹೊಂದಿದೆ. ರಂಜಕ ಪೋಷಕಾಂಶ ಏರಿಕೆಗೆ ಉತ್ತಮ ಪ್ರತಿಕ್ರಿಯೆಯನ್ನು ತೋರಿದೆ.